



ಮರುಕಳಿಸಬೇಕಾದ 'ಸುಂದರ ಸ್ವಪ್ನ'ಗಳು

ಕ್ಯಾರವಾನ್ ಬೇಕು ಎಂದು ಮೊದಲೇ ಹೇಳಿಬಿಡುವ ಪರಿಸ್ಥಿತಿ ನೋಡುತ್ತಿದ್ದೇವೆ.'

ಸಿನಿಮಾಗಳ ಸಂಖ್ಯಾಸಮೃದ್ಧಿಯ ಹೊಳೆಯಲ್ಲಿಯೇ ಕೆಲವು ಗುಣಾತ್ಮಕ ಚಿತ್ರಗಳು ಕೊಚ್ಚಿಕೊಂಡು ಹೋಗುತ್ತಿವೆ ಎಂದು ವಿಶ್ಲೇಷಿಸುವ ಸುರೇಶ್, ಹೊಸಬರು–ಹಳಬರೆಲ್ಲ ಸೇರಿ ಮಂಥನ ನಡೆಸಬೇಕಾದ ಕಾಲವಿದು ಎಂದು ಕಿವಿಮಾತನ್ನೂ ಹೇಳಿದರು. ಹೊಸ ಚಿಗುರು ಹಳೆ ಬೇರು ಕುಳಿತು ಮಾತನಾಡಲು ಮನಸ್ಸು ಮಾಡಿದರೆ, ವಾಣಿಜ್ಯ ಮಂಡಳಿ ಅದಕ್ಕೆ ಅನುವು ಮಾಡಿಕೊಡಲು ಸಿದ್ಧ ಎಂದು ಮಾತು ಸೇರಿಸಿದರು.

ಟಿಕೆಟ್ ದರವನ್ನು ಈ ಹಿಂದೆ ಸಿದ್ದರಾಮಯ್ಯ ಅವರೇ ಇಳಿಸಿದ್ದನ್ನು ನೆನಪಿಸಿಕೊಂಡ ಅವರು, ಕೆಲವು ಅಧಿಕಾರಶಾಹಿಗಳ ಹುನ್ನಾರದಿಂದ ಮತ್ತೆ ಟಿಕೆಟ್ ದರ ದುಬಾರಿಯಾದ ಸಂಗತಿಯ ಕಡೆಗೆ ಗಮನಸೆಳೆದರು. 'ಕೇರಳ, ತಮಿಳುನಾಡು, ಆಂಧ್ರಪ್ರದೇಶದಂತಹ ದಕ್ಷಿಣ ಭಾರತದ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲೇ ಸಿನಿಮಾ ಟಿಕೆಟ್ ಬೆಲೆ ಜಾಸ್ತಿ ಇದೆ. ಈ ವಿಷಯದಲ್ಲಿ ಏನಾದರೂ ಆದಲ್ಲಿ ಹೆಚ್ಚು ಹೆಚ್ಚು ಜನರು ಮೊದಲಿನಂತೆ ಚಿತ್ರಮಂದಿರಕ್ಕೆ ಬರಬಹುದು ಎನ್ನುವ ನಿರೀಕ್ಷೆ ಮತ್ತೆ ಗರಿಗೆದರಬಹುದು' ಎಂದರು.

ಸದ್ಯದಲ್ಲೇ ಮುಖ್ಯಮಂತ್ರಿಯವರನ್ನು ವಾಣಿಜ್ಯ ಮಂಡಳಿಯ ಒಂದು ನಿಯೋಗದೊಂದಿಗೆ ಭೇಟಿ ಮಾಡಿ, ಪ್ರಸಕ್ತ ಇರುವ ಸಮಸ್ಯೆಗಳನ್ನು ಚರ್ಚಿಸುವ ಉದ್ದೇಶವನ್ನೂ ಅವರು ಹಂಚಿಕೊಂಡರು.

ರವಿಚಂದ್ರನ್ ತಾವು ಬಿಡುವಾಗಿದ್ದು, ವರ್ಷಕ್ಕೆ ಹತ್ತು ಸಿನಿಮಾ ಮಾಡಲು ಸಿದ್ಧವಿರುವುದಾಗಿ ಹೇಳಿರುವುದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ಸುರೇಶ್, 'ಮೊನ್ನೆಯಷ್ಟೆ ತೆರೆಕಂಡ ಅವರದ್ದೇ ಅಭಿನಯದ 'ಜಡ್ಜ್‌ಮೆಂಟ್' ಸಿನಿಮಾ ಏನಾಯಿತು. ಸುಮ್ಮನೆ ಮಾತನಾಡುವುದು ಸುಲಭ. ಆಡಿದ್ದನ್ನು ಕೃತಿಗೆ ಇಳಿಸುವುದು ಕಷ್ಟ' ಎಂದು ಕಟುವಾಗಿ ಹೇಳಿದರು.

## ಹೊಸಬರಿಗೆ ಬೇಕು ಬೆಂಬಲ

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ನಿಕಟಪೂರ್ವ ಅಧ್ಯಕ್ಷರಾದ ಭಾ.ಮ. ಹರೀಶ್ ಕೂಡ ಸುರೇಶ್ ಅವರ ಅಭಿಪ್ರಾಯವನ್ನು ಬಹುತೇಕ ಸಮರ್ಥಿಸುವಂತೆ ಮಾತನಾಡಿದರು.

ತಾರೆಗಳಿಗೆ ಇಷ್ಟೇ ಸಿನಿಮಾ ಮಾಡಿ, ಅಷ್ಟೇ ಸಿನಿಮಾ ಮಾಡಿ ಎಂದು ಒತ್ತಡ ಹಾಕಲು ಸಾಧ್ಯವಿಲ್ಲ ಎನ್ನುವುದನ್ನು ಒಪ್ಪುವ ಅವರು, ಹೊಸಬರ ಸಿನಿಮಾಗಳನ್ನು ಪ್ರಚಾರದಿಂದ ಬೆಂಬಲಿಸುವ ಕೆಲಸವನ್ನಾದರೂ ದೊಡ್ಡ ನಟರು ಮಾಡಬೇಕು ಎನ್ನುವುದನ್ನು ಒತ್ತಿಹೇಳಿದರು.

'ಬಹುತೇಕ ಕಲಾವಿದರು, ನಿರ್ದೇಶಕರು ಗೊಂದಲದ ಸ್ಥಿತಿಯಲ್ಲಿ ಇರುವ ಕಾಲಘಟ್ಟವಿದು. ಆಗಿನ ತಾರೆಯರು ವರ್ಷಕ್ಕೆ ಐದಾರು ಸಿನಿಮಾಗಳನ್ನು ಮಾಡುತ್ತಿದ್ದರು. ಈಗಿನವರಿಗೆ ಹಾಗೆಲ್ಲ ಮಾಡಿ ಎನ್ನಲು ಸಾಧ್ಯವಿಲ್ಲ. ಅದು ಅವರವರ ಆಯ್ಕೆ. ಆದರೀಗ ಟೀವಿ, ಒಟಿಟಿ ತರಹದ ಮನರಂಜನಾ ಮಾಧ್ಯಮಗಳು ವಿಸ್ತೃತವಾಗಿವೆ. ರೀಲ್ಸ್ ಕೂಡ ಮನರಂಜನೆಯೇ. ಸಿಂಗಲ್ ಥಿಯೇಟರ್‌ಗಳ ಮಾಲೀಕರಿಗೆ ಎಷ್ಟೋ ಕಡೆ ವಿದ್ಯುತ್ ಬಿಲ್ ಕಟ್ಟುವಷ್ಟು ಹಣ ಕೂಡ ಗಿಟ್ಟುತ್ತಿಲ್ಲ. ಒಳ್ಳೆಯ ಸಿನಿಮಾಗಳೇನೋ ಬರುತ್ತಿವೆ. ನೋಡಲು ಜನರನ್ನು ಥಿಯೇಟರ್‌ಗೆ ಕರೆತರುವ ಪ್ರಯತ್ನಗಳು ನಡೆಯಬೇಕು. ಅದಕ್ಕೆ ತಾರೆಗಳ ಬೆಂಬಲ ಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಟೀವಿ, ಮೊಬೈಲ್‌ಗಳಲ್ಲೇ ಸಿನಿಮಾಗಳನ್ನು ನೋಡಿಕೊಂಡು ಇರಬೇಕಾಗುತ್ತದೆ' ಎನ್ನುವ ಹರೀಶ್ ಅವರ ಮಾತಿನಲ್ಲಿ ವಿಷಾದ, ಬೇಸರ ಬೆರೆತಿತ್ತು.

ಬೆಂಗಳೂರಿನ 'ವೀರೇಶ್' ಚಿತ್ರಮಂದಿರದ ಮಾಲೀಕರೂ ಇತ್ತೀಚೆಗೆ ಚಿತ್ರಗಳಿಗೆ ಮೊದಲಿನಂತೆ ಪ್ರೇಕ್ಷಕರು ಬರುತ್ತಿಲ್ಲ ಎಂದು ಅಳಲು

> ಕೇರಳ, ತಮಿಳುನಾಡು, ಆಂಧ್ರಪ್ರದೇಶದಂತಹ ದಕ್ಷಿಣ ಭಾರತದ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲೇ ಸಿನಿಮಾ ಟಿಕೆಟ್ ಬೆಲೆ ಜಾಸ್ತಿ ಇದೆ. ಈ ವಿಷಯದಲ್ಲಿ ಏನಾದರೂ ಆದಲ್ಲಿ ಹೆಚ್ಚು ಹೆಚ್ಚು ಜನರು ಮೊದಲಿನಂತೆ ಚಿತ್ರಮಂದಿರಕ್ಕೆ ಬರಬಹುದು.
>
> **-ಎನ್.ಎಂ. ಸುರೇಶ್**
>
> ಅಧ್ಯಕ್ಷ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

